**ಓ ಎಸ್ ನಂಃ 61/2022** **ಪಿ ಡಬ್ಲೂಃ3 ರಾಜಶೇಖರ**

ದಿನಾಂಕಃ 11/07/2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಆಯ್ ಎಫ್ ಹೆಚ್ ವಕೀಲರಿಂದಃ**

1. (ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರ ಮೂಲಕ ಸಲ್ಲಿಸಿರುತ್ತಾರೆ.) ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ, ಬರೆಸಿ ಓದಿಸಿ, ಕೇಳಿ ತಿಳಿದುಕೊಂಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ.

2. ಪ್ರತಿವಾದಿ ವಾದಿಗೆ ಬರೆದುಕೊಟ್ಟ ಸಂಚಕಾರ ಪತ್ರವನ್ನು ನಾನೇ ತಯಾರಿಸಿ ಸಹಿ ಮಾಡಿದ್ದು ನನ್ನ ಸಹಿಯನ್ನು ಗುರುತಿಸುತ್ತೇನೆ. (ಸಾಕ್ಷಿ ಗುರುತಿಸಿದ ಸಹಿಯನ್ನು ನಿಪಿಃ2 ಐ ಎಂದು ಗುರುತಿಸಲಾಯಿತು) ಪ್ರತಿವಾದಿ ವಾದಿಗೆ ಬರೆದುಕೊಟ್ಟ ಸಂಚಕಾರ ಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ಸಹಿ ಮಾಡಿದ್ದು ಅವರ ಸಹಿಗಳನ್ನು ಗುರುತಿಸುತ್ತೇನೆ. (ಸಾಕ್ಷಿ ಗುರುತಿಸಿದ ವಾದಿ ಮತ್ತು ಪ್ರತಿವಾದಿಗಳ ಸಹಿಯನ್ನು ಈಗಾಗಲೇ ನಿಪಿಃ2 ಬಿ ಯಿಂದ ಇ ಎಂದು ಗುರುತಿಸಲಾಯಿತು) ಪ್ರತಿವಾದಿ ವಾದಿಗೆ ಬರೆದುಕೊಟ್ಟ ಸಂಚಕಾರ ಪತ್ರಕ್ಕೆ ಪ್ರತಿವಾದಿಯ ಹೆಂಡತಿ ಮತ್ತು ಮಗಳು ಸಾಕ್ಷಿಯಾಗಿ ಸಹಿ ಮಾಡಿದ್ದು ಮತ್ತು ಸಾಕ್ಷಿದಾರರಾದ ಪಿ ಆರ್ ಹಡಪದ ಮತ್ತು ಅಪ್ಪಣ್ಣ ಮಾ. ಜಾವೂರ ಅವರು ಸಹಿ ಮಾಡಿದ್ದು ಸದರಿಯವರ ಸಹಿಯನ್ನು ಸಹ ಗುರುತಿಸುತ್ತೇನೆ. (ಸಾಕ್ಷಿ ಗುರುತಿಸಿದ ಸಹಿಯನ್ನು ಈಗಾಗಲೇ ನಿಪಿಃ2 ಎಫ್ ಯಿಂದ ಹೆಚ್ ಎಂದು ಗುರುತಿಸಲಾಗಿದೆ)

**ಪಾಟೀ ಸವಾಲು** ಃ ( ಪ್ರತಿವಾದಿಯ ವಿರುದ್ಧ ಏಕಪಕ್ಷೀಯ ಆದೇಶವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ 11-07-2023 ರಂದು ಬೆಳಿಗ್ಗೆ 11ಃ50 ರಿಂದ 11ಃ54 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ